ಈ) ಸದರೀ ಜಮಿನನ್ನು ಇಷ್ಟು ದೊಡ್ಡ ಮೊತ್ತದಲ್ಲಿ ಒಮ್ಮೆಲೇ ಒಂದು ಸಂಸ್ಥೆಗೆ ನೀಡಲು ತಹಶೀಲ್ದಾರರಿಗೆ ಅಧಿಕಾರವಿದೆಯೇ.

ಉ) ಸರ್ಕಾರದ ಅನೇಕ ಕಛೇರಿಗಳಿಗೆ ಸ್ಥಳ ಒದಗಿಸಲು ಸ್ಥಳ ಇಲ್ಲದಿರುವಾಗ ಹೀಗೆ ಒದಗಿಸಿದ್ದು ನ್ಯಾಯವೇ?

ಊ) ಈ ವಿಷಯದಲ್ಲಿ ಜಮೀನನ್ನು ಶಿಕ್ಷಣ ಸಂಸ್ಥೆಗೆ ಮಂಜೂರು ಮಾಡಲು ಸರ್ಕಾರ ಆದೇಶ ವಿತ್ತಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಗೋಕಾಕ ನಗರ ಹಾಗೂ ತಾಲ್ಲೂಕಿನಲ್ಲಿ ಯಾವುದೇ ಕಂದಾಯ ಪಡ ಜಮೀನು ಇರುವುದಿಲ್ಲ.

ಆ) ಜನವರಿ 1995ರಿಂದ ಯಾವುದೇ ಕಂದಾಯ ನಿರುಪಯೋಗಿ ಪಡ ಜಮೀನನ್ನು ಮಂಜೂರು ಮಾಡಿರುವುದಿಲ್ಲ.

ಇ) ಯಾವುದೇ ಶಿಕ್ಷಣ ಸಂಸ್ಥೆಗೆ ಜಮೀನು ಮಂಜೂರು ಮಾಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಗೋಕಾಕ್ ತಾಲ್ಲೂಕಿನಲ್ಲಿ ಬಸ್ಸಿನ ಸೌಕರ್ಯ ಕುರಿತು

2060 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ಡಿಪೋದಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಓಡುತ್ತಿರುವ ಮತ್ತು ರಿಪೇರಿಗೆ ಒಳಪಟ್ಟ ಬಸ್ಸುಗಳ ಸಂಖ್ಯೆ ಎಷ್ಟು?

ಇ) ಗೋಕಾಕ ತಾಲ್ಲೂಕಿನ ಗುಜನಾಳ ಗಡನೆಲಗಂಟಿ ಕಡಬಗಟ್ಟಿ ಮುಂತಾದ ಹಳ್ಳಿಗಳಿಗೆ ಬ್ರಿಟೀಷರ ಕಾಲದಿಂದ ಇದುವರೆಗೆ ಬಸ್‌ನ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಾದರೆ ಒಳ ಪ್ರದೇಶವಾದ 8 ರಿಂದ 10 ಕಿ.ಮೀ ಒಳಗಿರುವ ಸದರಿ ಹಳ್ಳಿಗಳಿಗೆ ಬಸ್‌ನ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಗೋಕಾಕ ನಗರದಿಂದ ಬಸ್ ನಿಲ್ದಾಣವನ್ನು ನಗರದ ಹೊರ ಪ್ರದೇಶಕ್ಕೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಬೆಳಗಾವಿ ವಿಭಾಗದ ಗೋಕಾಕ್ ಡಿಪೋ ದಿನಾಂಕ 31-8-1995ಕ್ಕೆ ಸರಿಯಾಗಿ 93 ವಾಹನಗಳನ್ನು ಹೊಂದಿದೆ.

ಆ) ಈ ವಾಹನಗಳಲ್ಲಿ 90 ವಾಹನಗಳು ಮಾರ್ಗದ ಮೇಲೆ ಓಡುತ್ತಿದ್ದು 3 ವಾಹನಗಳು ದುರಸ್ತಿಯಲ್ಲಿವೆ.

ಇ) ಈ ಹಳ್ಳಿಗಳಿಗೆ ವಾಹನ ಯೋಗ್ಯ ರಸ್ತೆಗಳಿಲ್ಲದಿರುವುದರಿಂದ ಸಾರಿಗೆ ಸೌಕರ್ಯವನ್ನು ಕಲ್ಪಿಸಲಾಗಿರುವುದಿಲ್ಲ.

ಈ) ಗಡ, ಗುಜಾಳ ಮತ್ತು ಕಡಬಗಟ್ಟಿ ಹಳ್ಳಿಗಳಿಗೆ ಆಗಸ್ಟ್ 1995ರಲ್ಲಿ ವಾಹನ ಯೋಗ್ಯ ರಸ್ತೆಗಳನ್ನು ನಿರ್ಮಿಸಲಾಗಿದೆ. ಈ ಹಳ್ಳಿಗಳಿಗೆ ಸಾರಿಗೆ ಸೌಕರ್ಯ

ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದು. ನೆಲಗಂಟಿ ಹಳ್ಳಿಗೆ ವಾಹನ ಯೋಗ್ಯ ರಸ್ತೆಯಿರುವುದಿಲ್ಲ.

ಊ) ಹಾಲಿ, ಬಸ್ ನಿಲ್ದಾಣವನ್ನು ಸ್ಥಳಾಂತರಿಸಲು ಯಾವುದೇ ಪ್ರಸ್ತಾವನೆಯಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸಂಬಂಧ ಪಟ್ಟ ಉತ್ತರಗಳನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದಪತ್ರಗಳು

I ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾಗಳ ಸಚಿವರು): ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಮಂತ್ರಿ)ರವರ ಪರವಾಗಿ :

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 42(3)ನೇ ಕಲಮಿನ ಮೇರೆಗೆ :

1992-93ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

II. ಶ್ರೀ ಎ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಶ್ರೀ ಎಂ.ಪಿ. ಪ್ರಾಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) ರವರ ಪರವಾಗಿ :

1993ರ ಕರ್ನಾಟಕ ಪಂಚಾಯತ್ ರಾಜ್ಅಧಿನಿಯಮದ 262(3)ನೇ ಕಲಮಿನ ಮೇರೆಗೆ :

1992-93ನೇ ಸಾಲಿನ ಕೋಲಾರ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

III. ಶ್ರಿ ವೈಜನಾಥ ಪಾಟೀಲ್ (ನಗಾರಾಭಿವೃದ್ಧಿ ಮಂತ್ರಿ) ಅವರು :

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮದ ೪೮(೫)ನೇ ಕಲಮಿನ ಮೇರೆಗೆ

1) 1992-93ನೇ ಸಾಲಿನ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತನಿಖಾ ವರದಿ;
2) 1993-94ನೇ ಸಾಲಿನ ಹಾಸನ ನಗಾರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣಾ ವರದಿ;
3) 1986-87 ಹಾಗೂ 1987-88ನೇ ಸಾಲುಗಳ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣಾ ವರದಿಗಳು;
4) 1993-94ನೇ ಸಾಲಿನ ಚಿಕ್ಕ ಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;
5) 1986-87, 1987-88, 1.4.88 ರಿಂದ 17.6.88ರವರಗೆ ಹಾಗೂ 1993-94ನೇ ಸಾಲುಗಳ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿಗಳು;